**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-56003.**

ಸಂಖ್ಯೆ: ಎ8/ಎಸ್ಎಸ್ಎಲ್‌ಸಿ/ಮೂ.ಪ-21/24/21-22 ದಿನಾಂಕ:27.08.2021

**:: ಸುತ್ತೋಲೆ ::**

ವಿಷಯ:- 2020-21ನೇ ಸಾಲಿನ ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷೆಗೆ ವಿದ್ಯಾರ್ಥಿಗಳ ನೋಂದಣಿ ಕುರಿತು.
ಉಲ್ಲೇಖ:- 1. ಸರ್ಕಾರದ ಆದೇಶ ಸಂಖ್ಯೆ:ಇಪಿ 110 ಎಸ್ಎಲ್‌ಬಿ 2021 ದಿನಾಂಕ:16.08.2021.
2. ಈ ಕಛೇರಿ ಅಧಿಸೂಚನೆ ಎ8/ಎಸ್ಎಸ್ಎಲ್‌ಸಿ/ಮೂ.ಪ-21/24/21-22 ದಿನಾಂಕ:18.08.2021.

*******

2020-21ನೇ ಸಾಲಿನ ಎಸ್.ಎಸ್.ಎಲ್.ಸಿ ಪೂರಕ ಪರೀಕ್ಷೆಗೆ ಹಾಜರಾಗುವ ಅರ್ಹ ವಿದ್ಯಾರ್ಥಿಗಳ ನೋಂದಣಿ ಕುರಿತು ಎಲ್ಲಾ ವಿವರಗಳನ್ನೊಳಗೊಂಡ ಅಧಿಸೂಚನೆಯನ್ನು ಉಲ್ಲೇಖಿತ-2ರಲ್ಲಿ ಹೊರಡಿಸಲಾಗಿರುತ್ತದೆ. ಸದರಿ ಅಧಿಸೂಚನೆಯ ಕ್ರಮ ಸಂಖ್ಯೆ:1ರಲ್ಲಿ 2020-21ನೇ ಸಾಲಿನ ಪೂರಕ ಪರೀಕ್ಷೆಗೆ ಕೆಳಕಂಡ ಅಭ್ಯರ್ಥಿಗಳನ್ನು ಮಾತ್ರ ನೋಂದಾಯಿಸಲು ಅವಕಾಶ ಕಲ್ಪಿಸಲಾಗಿದೆ.

a) **CCERF (2020-21** ನೇ ಸಾಲಿನ ಮುಖ್ಯ ಪರೀಕ್ಷೆಗೆ ನೋಂದಾಯಿಸಿ ಕೋವಿಡ್-19 ಮತ್ತು ಇತರೆ ಅನಾರೋಗ್ಯದ ಕಾರಣದಿಂದ ಪರೀಕ್ಷೆಗೆ ಗೈರುಹಾಜರಾದ ಮತ್ತು ನೋಂದಾಯಿಸದ ಅರ್ಹ ಶಾಲಾ ವಿದ್ಯಾರ್ಥಿಗಳು ಮಾತ್ರ).
b) **CCERR** ಏಪ್ರಿಲ್-2019ರ ಮುಖ್ಯ ಪರೀಕ್ಷೆಯಿಂದ ಪ್ರಥಮ ಬಾರಿಗೆ ನೋಂದಾಯಿಸಿ ಅನುತ್ತೀರ್ಣರಾದ ಅರ್ಹ ಪುನರಾವರ್ತಿತ ಶಾಲಾ ವಿದ್ಯಾರ್ಥಿಗಳು.
c) **CCEPF (2020-21** ನೇ ಸಾಲಿನ ಮುಖ್ಯ ಪರೀಕ್ಷೆಗೆ ನೋಂದಾಯಿಸಿ ಕೋವಿಡ್-19 ಮತ್ತು ಇತರೆ ಅನಾರೋಗ್ಯದ ಕಾರಣದಿಂದ ಪರೀಕ್ಷೆಗೆ ಗೈರುಹಾಜರಾದ ಅರ್ಹ ಖಾಸಗಿ ಅಭ್ಯರ್ಥಿಗಳು ಮಾತ್ರ)
d) **CCEPR** ಏಪ್ರಿಲ್-2019ರ ಮುಖ್ಯ ಪರೀಕ್ಷೆಯಿಂದ ಪ್ರಥಮ ಬಾರಿಗೆ ನೋಂದಾಯಿಸಿ ಅನುತ್ತೀರ್ಣರಾದ ಅರ್ಹ ಖಾಸಗಿ ಪುನರಾವರ್ತಿತ ವಿದ್ಯಾರ್ಥಿಗಳು.
e) **NSR** ಮತ್ತು **NSPR** ಪುನರಾವರ್ತಿತ ಅಭ್ಯರ್ಥಿಗಳು - 2011ಕ್ಕೂ ಹಿಂದಿನ ಎಸ್.ಎಸ್.ಎಲ್.ಸಿ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ಅರ್ಹ ಪುನರಾವರ್ತಿತ ಶಾಲಾ ಮತ್ತು ಖಾಸಗಿ ಅಭ್ಯರ್ಥಿಗಳು ಹಾಗೂ ಏಪ್ರಿಲ್-2019 ರಿಂದ ಎಸ್ಎಸ್ಎಲ್‌ಸಿ ಮುಖ್ಯ ಪರೀಕ್ಷೆಗೆ ಪ್ರಥಮ ಬಾರಿಗೆ ನೋಂದಾಯಿಸಿ ಅನುತ್ತೀರ್ಣರಾದ **NSR** ಮತ್ತು **NSPR** ಅಭ್ಯರ್ಥಿಗಳು.

ಮೇಲ್ಕಂಡ ವಿಧದ ವಿದ್ಯಾರ್ಥಿಗಳನ್ನು ಮಾತ್ರ 2020-21ನೇ ಸಾಲಿನ ಪೂರಕ ಪರೀಕ್ಷೆಗೆ ನೋಂದಾಯಿಸಲು ಅವಕಾಶ ಕಲ್ಪಿಸಲಾಗಿರುತ್ತದೆಂದು ತಿಳಿಸಲಾಗಿದ್ದರೂ ಸಹ, ಮೇಲಿನ ಕ್ರಮ ಸಂಖ್ಯೆ (a) CCERF ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ 2020-21 ನೇ ಸಾಲಿನ ಮುಖ್ಯ ಪರೀಕ್ಷೆಗೆ ನೋಂದಾಯಿಸಿ ಕೋವಿಡ್-19 ಮತ್ತು ಇತರೆ ಅನಾರೋಗ್ಯದ ಕಾರಣದಿಂದ ಪರೀಕ್ಷೆಗೆ ಗೈರುಹಾಜರಾದ ಮತ್ತು ನೋಂದಾಯಿಸದ ಅರ್ಹ ಶಾಲಾ ವಿದ್ಯಾರ್ಥಿಗಳನ್ನು ಮಾತ್ರ ನೋಂದಾಯಿಸಬೇಕಾಗಿರುತ್ತದೆ.

ಆದರೆ ಕೆಲವು ಶಾಲೆಗಳ ಮುಖ್ಯ ಶಿಕ್ಷಕರು 2020-21ನೇ ಸಾಲಿಗಿಂತ ಹಿಂದಿನ ಶೈಕ್ಷಣಿಕ ವರ್ಷಗಳಲ್ಲಿ 9ನೇ ತರಗತಿಯಿಂದ 10ನೇ ತರಗತಿಗೆ ಉತ್ತೀರ್ಣರಾಗಿ, 10ನೇ ತರಗತಿ ಶಾಲೆ ಬಿಟ್ಟಂತಹ, ಅರ್ಧಕ್ಕೆ ಶಾಲೆ ಬಿಟ್ಟಂತಹ ಅಥವಾ ಹಾಜರಾತಿ ಕೊರತೆಯಿಂದ ಎಸ್ಎಸ್ಎಲ್‌ಸಿ ಪರೀಕ್ಷೆಗೆ ನೋಂದಾಯಿಕೊಳ್ಳದಂತಹ ವಿದ್ಯಾರ್ಥಿಗಳನ್ನು ಸಹ ಅವರ ಎಸ್ಎಟಿಎಸ್ ಸಂಖ್ಯೆಯನ್ನು ಬಳಸಿ CCERF ವಿದ್ಯಾರ್ಥಿಯಾಗಿ ಸೆಪ್ಟಂಬರ್-2021ರ ಪೂರಕ ಪರೀಕ್ಷೆಗೆ ಆನ್‌ಲೈನ್ ಮುಖಾಂತರ ಶಾಲಾಲಾಗಿನ್ ನಲ್ಲಿ ನೋಂದಾಯಿಸುತ್ತಿರುವುದನ್ನು ಗಮನಿಸಲಾಗಿದೆ. ಇದು ನಿಯಮಬಾಹಿರವಾಗಿದ್ದು, ಇಂತಹ 2020-21ನೇ ಸಾಲಿಗಿಂತ ಹಿಂದಿನ ಶೈಕ್ಷಣಿಕ ಸಾಲುಗಳ ವಿದ್ಯಾರ್ಥಿಗಳನ್ನು ಸೆಪ್ಟಂಬರ್-2021ರ ಪೂರಕ ಪರೀಕ್ಷೆಗೆ ನೋಂದಾಯಿಸಿರುವುದನ್ನು ಪರಿಗಣಿಸಲಾಗುವುದಿಲ್ಲ.

ಮುಂದುವರೆದು, ಇಂತಹ ವಿದ್ಯಾರ್ಥಿಗಳನ್ನು ಸೆಪ್ಟಂಬರ್-2021ರ ಪೂರಕ ಪರೀಕ್ಷೆಗೆ ಆನ್‌ಲೈನ್ ಮುಖಾಂತರ ಶಾಲಾಲಾಗಿನ್ ನಲ್ಲಿ ನೋಂದಾಯಿಸದಿರಲು ತಿಳಿಸಿದೆ. ಒಂದು ವೇಳೆ ಇಂತಹ ವಿದ್ಯಾರ್ಥಿಗಳನ್ನು ನೋಂದಾಯಿಸಿದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಬಂಧಪಟ್ಟ ಮುಖ್ಯ ಶಿಕ್ಷಕರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

(ವಿ ಸುಮಂಗಲ)
ನಿರ್ದೇಶಕರು(ಪರೀಕ್ಷೆಗಳು)

ಗೆ,

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಕಳುಹಿಸುತ್ತಾ ಈ ಬಗ್ಗೆ ತಮ್ಮ ವ್ಯಾಪ್ತಿಯಲ್ಲಿ ಬರುವ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮತ್ತು ಮುಖ್ಯ ಶಿಕ್ಷಕರಿಗೆ ಸೂಕ್ತ ನಿರ್ದೇಶನ ನೀಡುವುದು.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಅನುದಾನಿತ/ಅನುದಾನ ರಹಿತ ಶಾಲಾ ಮುಖ್ಯ ಶಿಕ್ಷಕರಿಗೆ ಸೂಕ್ತ ಕ್ರಮಕ್ಕಾಗಿ (ಶಾಲಾ ಲಾಗಿನ್ ಮುಖಾಂತರ).

A8_letter1